"ಯಾರು ಫೋನ್ ಮಾಡಿದ್ದು?"

"ನಾನು ತೋಗೋಳೋ ಹೊತ್ತಿಗೆ ನಿಂತು ಹೋಯಿತು. ಯಾರೋ ಗೊತ್ತಾಗಲಿಲ್ಲ."

"ಅಲ್ಲಾರೀ, ಏನಿಲ್ಲ ಅಂದರೂ ಎರಡು ಮೂರು ನಿಮಿಷ ರಿಂಗ್ ಆಗಿದೆ. ನಿಮಗೆ ಕೇಳಿಸಲಿಲ್ಲವಾ."

"ನನಗೆ ಹಾಗೇ ತೂಕಡಿಕೆ ಬಂದ ಹಾಗಾಯ್ತು. ನೀನು ಹೇಳಿದ ಮೇಲೇನೆ ಗೊತ್ತಾಗಿದ್ದು."

"ವಾಣಿ ಇರಬೇಕು ಫೋನ್ ಮಾಡಿದ್ದು. ನಾನೇ ಆಮೇಲೆ ರಿಂಗ್ ಮಾಡ್ತೀನಿ."

ಸ್ನಾನಕ್ಕೆ ಹೊರಟರು ರೇವತಿ.

"ರೀ, ಸ್ನಾನಮಾಡಿಕೊಂಡು ಬರ್ತೀನಿ. ಆಮೇಲೆ ಶಾಪಿಂಗ್ ಹೋಗಬೇಕು. ಫೋನ್ ಬಂದರೆ ತೊಗೋಳಿ. ನಿಮ್ಮ ಗರ್ಲ್ ಫ್ರೆಂಡ್‌ಗಳನ್ನ ಜ್ಞಾಪಿಸಿಕೊಂಡು ಕೂರಬೇಡಿ" ಎಂದು ನಕ್ಕರು. ಪ್ರಸಾದ್ ನಗಲಿಲ್ಲ.

ಮತ್ತೆ ಫೇಸ್‌ಬುಕ್ ತೆರೆದರು ಪ್ರಸಾದ್. ಈಗ ನೇರ ಗೀತಾ ನಾಗರಾಜಳ ಪುಟಕ್ಕೇ ಹೋದರು. ಮತ್ತೆ ಅವಳ ಫೋಟೊ ನೋಡಿ ಅವಾಕ್ಕಾದರು. ಅವಳ ಬಗ್ಗೆ ಏನೇನು ಹಾಕಿಕೊಂಡಿದ್ದಾಳೆ ನೋಡಿದರು. 'ಬೆಂಗಳೂರಿನ ಜಯನಗರದಲ್ಲಿ ವಾಸ. ಹವ್ಯಾಸಿ ಇಂಟೀರಿಯರ್ ಡೆಕೋರೇಟರ್, ಅಡಿಗೆಯಲ್ಲಿ ಮತ್ತು ಸಿನಿಮಾಗಳಾಲ್ಲಿ ಆಸಕ್ತಿ' ಎಂದಿತ್ತು. ಮಕ್ಕಳ ಬಗ್ಗೆ ಏನೂ ಇರಲಿಲ್ಲ. ಇಲ್ಲವೇನೋ ಎಂದುಕೊಂಡರು.

'ತಾತನಾದ ನಾನು ಯಾವುದೋ ಹಳೆಯ ವಿಚಾರಕ್ಕೆ ಮರುಳನಾದೆನಲ್ಲಾ, ಛೇ' ಎಂದು ಫೇಸ್‌ಬುಕ್ ಮುಚ್ಚಿದರು. ಲೌಂಜಿಗೆ ಬಂದು ಟೀವಿ ಹಚ್ಚಿದರು. ಕೆಲಸಕ್ಕೆ ಬಾರದ ವಾರ್ತೆಗಳು. ಸುಮ್ಮನೇ ಟೀವಿ ಪರದೆ ದಿಟ್ಟಿಸುತ್ತ ಕೂತರು. ಮತ್ತೆ ಅವಳದೇ ಚಿತ್ರ. ಮತ್ತೆ ಕಾಫಿ ಮಾಡಿಕೊಂಡು ಕುಡಿಯಲಾರಂಭಿಸಿದರು. ಅದೇ ಚಿತ್ರ, ಅದೇ ನೆನಪು.

'ನಾನು ಮಾಡಿದ್ದು ತಪ್ಪಲ್ಲವೇ? ನನ್ನ ಸೌಜನ್ಯ ಏನಾಗಿತ್ತು? ಏನೋ ರೋಷ, ಏನೋ ಸಿಟ್ಟು.' ಆಗ ಅವರಿಗೆ ಅವರ ತಾಯಿ ಆಡುತ್ತಿದ್ದ ಮಾತು ನೆನಪಿಗೆ ಬಂತು.

'ಯಾವುದೂ ನಮ್ಮ ಕೈಯ್ಯಲಿಲ್ಲ. ಆಗೋದೆಲ್ಲಾ ಆಗೇ ಆಗುತ್ತೆ. ನಾವು ತಡೆಯೋಕಾಗಲ್ಲ. ಆಗದೇ ಇರೋದು, ಯಾರು ಏನು ಮಾಡಿದರೂ ಆಗೋದಿಲ್ಲ. ಸುಮ್ಮನೇ ತಲೆ ಕೆಡಿಸಿಕೊಳ್ಳಬಾರದು.'

'ಎಂತಹ ವೇದಾಂತ' ಅನ್ನಿಸಿತು. 'ಅಂದಮೇಲೆ, ನಾನೂ ಗೀತಾ ಮದುವೆಯಾಗೋದು ಸಾಧ್ಯವಿಲ್ಲ ಎನ್ನುವುದು ಪೂರ್ವನಿರ್ಧಾರ ಆಗಿತ್ತು. ಅದನ್ನು ತಪ್ಪಿಸಲು ನಾನ್ಯಾರು?'

ಮತ್ತೆ ಅನ್ನಿಸಿತು 'ಇದೆಂತಹ ಅಜ್ಞಾನತೆ. ನಾನೇ ಅಲ್ಲವೇ ಇದಕ್ಕೆಲ್ಲಾ ಕಾರಣ? ನಾನು ಸರಿಯಾಗಿ ಆಲೋಚಿಸಿದ್ದರೆ ದುಡುಕುತ್ತಿರಲಿಲ್ಲ. ಅಷ್ಟೇಕೆ? ಮೊದಲನೆಯದಾಗಿ ಅವಳ ತಂದೆಯ ಮುಂದೆ ಮದುವೆ ಪ್ರಸ್ತಾಪ ಮಾಡಿದ್ದು ನನ್ನ ತಪ್ಪು. ಹಿಂದೆ ಮುಂದೆ ನೋಡದೆ ಮಾಡಿದ ಕೆಲಸ ಅದು. ಒಂದು ತಪ್ಪನ್ನು ತಿದ್ದಲು ನಂತರ ಇನ್ನೊಂದು ತಪ್ಪು ಮಾಡಿದೆ.'

'ಹಾಗಲ್ಲ, ಈ ತಪ್ಪುಗಳನ್ನು ಮಾಡುವುದೂ ಯಾವುದೋ ಪೂರ್ವನಿರ್ಧಾರದಂತೆಯೇ. ನನ್ನದೇನೂ ಭಾಗವಿಲ್ಲ ಅದರಲ್ಲಿ.'

ರೇವತಿ ಸ್ನಾನ ಮುಗಿಸಿ, ದೇವರ ಮುಂದೆ ದೀಪ ಹಚ್ಚಿ, ಎರಡು ಬಿಸ್ಕತ್ತುಗಳನ್ನು ತಿಂದು ಹೊರಟು ನಿಂತರು. ಪ್ರಸಾದ್ ಇನ್ನೂ ಟೀವಿಯ ಮುಂದೆ ಕುಳಿತಿದ್ದರು.

"ಏನು ಹೀಗೆ ಸಪ್ಪಗೆ ಕೂತಿದ್ದೀರ, ಹುಷಾರಾಗಿದೀರಿ ತಾನೆ?"

"ಏನೂ ಇಲ್ಲ ಸುಮ್ಮನೇ ಕೂತಿದ್ದೆ" ಎಂದವರೇ ಎದ್ದು ಟೀವಿ ಆಫ್ ಮಾಡಿದರು.

"ಇವತ್ತು ಗುಡ್ ಗೈಯ್ಸ್‌ನಲ್ಲಿ ಹೊಸಾ ಮೈಕ್ರೋವೇವ್ ಓವನ್ ಸೇಲಿಗೆ ಹಾಕಿದ್ದಾರೆ. ನೋಡಿಕೊಂಡು ಬರೋಣ."